# ಮುದ್ರಾಮಂಜೂಷ

## ಸಮಕಾಲೀನ ಸ್ಪಂದನೆಯ ಐತಿಹಾಸಿಕ ಕೃತಿ



ಬಿ. ಜನಾರ್ದನ ಭಟ್

ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ್ ಅರಸರ ಆಸ್ಥಾನದಲ್ಲಿದ್ದ ಕೆಂಪುನಾರಾಯಣ ಶಾಸ್ತ್ರಿಗಳು 1823ರಲ್ಲಿ ರಚಿಸಿದ 'ಮುದ್ರಾಮಂಜೂಷ' ಎನ್ನುವ ಕಾದಂಬರಿ ರೂಪದ ಗ್ರಂಥವೇ ಆಧುನಿಕ ಕನ್ನಡದ ಮೊದಲನೆಯ ಐತಿಹಾಸಿಕ ಕಾದಂಬರಿ. (ಸಮಕಾಲೀನ ವಸ್ತುವನ್ನೇ ಆಧರಿಸಿದ ಸಾಮಾಜಿಕ ಕಾದಂಬರಿ ಅಥವಾ ನಾವೆಲ್ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ').

ಕೃತಿ ರಚನೆಯಾಗಿ ಐವತ್ತು ವರ್ಷಗಳ ನಂತರ, 1871ರಲ್ಲಿ ರೆ.ಫಾ.ಜೆ. ಸ್ಟೀವನ್ಸನ್ ಎಂಬ ವೆಸ್ಲಿಯನ್ ಮಿಶನರಿಯು ಇದನ್ನು ಮುದ್ರಿಸಿದನು. 1840ರಲ್ಲಿ ಮುದ್ರಣಾಲಯವು ಬೆಂಗಳೂರಿನಲ್ಲಿ ಪ್ರಾರಂಭವಾದರೂ ಇದರ ಪ್ರಕಟಣೆ ಬಹಳ ತಡವಾಗಿ ಆದುದು ಕುತೂಹಲಕರವಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಸ್ವತಃ ಸಾಹಿತಿಯಾಗಿದ್ದರೆಂದು ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಿದೆ ಮತ್ತು ಸುಮಾರು ಐವತ್ತು ಕೃತಿಗಳನ್ನು ಅವರ ಹೆಸರಿನಲ್ಲಿ ಪ್ರಕಟಿಸಲಾಗಿದೆ. ಅವುಗಳನ್ನು ಬೇರೆಯವರು ಬರೆದು ಒಡೆಯರ ಹೆಸರಿಗೆ ಅರ್ಪಿಸಿದ್ದಾರೆಂದು ಡಾ.ಹಾವನೂರು ಮುಂತಾದವರು ತರ್ಕಿಸಿದ್ದಾರೆ. ಹೊಸಗನ್ನಡದ ಕಾದಂಬರಿ ರೂಪದ ಮೂರು ಗ್ರಂಥಗಳು ಈ ಕಾಲದಲ್ಲಿ ಬಂದವು. ಅವುಗಳು:

1. 1815–ಕಲಾವತಿ ಪರಿಣಯ. ಕೃತಿಕಾರ: ಯಾದವ. ಸುಮಾರು 315 ಪುಟಗಳು.
2. 1821–ಸೌಗಂಧಿಕಾ ಪರಿಣಯ. ಕೃತಿಕಾರ: ಮುಮ್ಮಡಿ ಕೃಷ್ಣರಾಜ ಒಡೆಯರು. ಸುಮಾರು 800 ಪುಟಗಳು.
3. 1823–ಮುದ್ರಾಮಂಜೂಷ. ಕೃತಿಕಾರ: ಕೆಂಪುನಾರಾಯಣ ಶಾಸ್ತ್ರಿ. ಸುಮಾರು 350 ಪುಟಗಳು.

ಇವುಗಳ ಪೈಕಿ 'ಮುದ್ರಾಮಂಜೂಷ'ವು ಐತಿಹಾಸಿಕ ಕಾದಂಬರಿ ಎಂಬ ಮಾದರಿಯ ಆಧುನಿಕ ಕನ್ನಡ ಕಾದಂಬರಿಯೇ ಆಗಿದೆ ಎನ್ನುವುದನ್ನು ಹಲವು ವಿದ್ವಾಂಸರು ಒಪ್ಪಿದ್ದಾರೆ. ಮಂಜೇಶ್ವರ ಗೋವಿಂದ ಪೈಗಳು ಯಾದವನನ್ನೇ ಮೊದಲನೆಯ ಕಾದಂಬರಿಕಾರನೆಂದು ಗುರುತಿಸಿದ್ದಾರೆ. ಮೊದಲಿನ ಎರಡು ಕೃತಿಗಳು ಇಂಗ್ಲಿಷಿನ 'ರೋಮಾನ್ಸ್' ಎಂಬ ಮಾದರಿಯ ಕೃತಿಗಳು. 'ರೋಮಾನ್ಸ್'ಗಳನ್ನು ಜಗತ್ತಿನಾದ್ಯಂತ ಆಧುನಿಕ ಕಾದಂಬರಿಗಳೆಂದು ಗುರುತಿಸುವುದಿಲ್ಲ. ಅದರಂತೆ ನಾವು ಕೂಡ ಮೊದಲ